22	MYSURU	11.78	23.67	40.31	67.19	74.94	241.14	459.03
23	RAICHUR	15.40	111.44	97.17	243.11	159.90	397.03	1024.05
24	RAMANAGARA	7.05	39.00	76.53	102.14	61.39	195.42	481.53
25	SHIVAMOGGA	7.07	11.51	29.60	32.04	27.29	138.63	246.14
26	TUMAKURU	20.99	67.50	71.23	97.76	76.51	371.33	705.32
27	UDUPI	1.10	3.03	3.85	3.63	2.47	17.73	31.81
28	UTTARA KANNADA	4.17	8.77	12.40	29.45	23.16	65.79	143.74
29	VIJAYPURA	41.78	58.64	37.39	89.00	87.45	257.53	571.79
30	Yadgir	24.61	40.31	91.04	116.57	80.85	358.10	711.48
	Total	414.83	1139.69	1545.47	2753.21	1678.45	7286.28	**14817.93**

C

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/107/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07 .12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಲಿಂಗೇಶ ಕೆ. ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1060ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಲಿಂಗೇಶ ಕೆ. ಎಸ್. (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1060ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 04/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1060

ಉತ್ತರಿಸಬೇಕಾದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ. ಎಸ್. (ಬೇಲೂರು)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಹಾಸನ ನಗರದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿಯನ್ನು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಅಂದಾಜು ಮೊತ್ತ ರೂ.8.25 ಕೋಟಿಗಳ ವೆಚ್ಚಕ್ಕೆ ಅನುಮೋದನೆ ನೀಡಿ, ಈ ಪೈಕಿ ಈಗಾಗಲೇ ರೂ.3.00 ಕೋಟಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಡಿಪಾಸಿಟ್ ಮಾಡಿರುವುದು ನಿಜವೇ.	ಹೌದು.
ಆ	ಉಳಿಕೆ ರೂ. 5.25 ಕೋಟಿಗಳ ಪೈಕಿ ರೂ.1.25 ಕೋಟಿ ರಾಜ್ಯ ಸರ್ಕಾರವು ಮತ್ತು ಇನ್ನುಳಿದ ರೂ.4.00 ಕೋಟಿಗಳನ್ನು ಕೇಂದ್ರ ಸರ್ಕಾರವು ಭರಿಸಬೇಕಾಗಿದ್ದು, ಈಗಾಗಲೇ ಮುಂಗಡ ಇಟ್ಟಿರುವ ರೂ. 3.00 ಕೋಟಿಗಳ ವೆಚ್ಚದ ಕಾಮಗಾರಿಯು ಮುಗಿದ ನಂತರ ಈ ಮೊತ್ತವನ್ನು ಬಿಡುಗಡೆ ಮಾಡಲಾಗುವುದೆಂದು ಕೇಂದ್ರ ಸರ್ಕಾರವು ತಿಳಿಸಿರುವುದು ನಿಜವೇ;	ಹೌದು. ಕೇಂದ್ರ ಸರ್ಕಾರವು ಕಾಮಗಾರಿಗಾಗಿ ಬಿಡುಗಡೆ ಮಾಡಿದ ಮೊದಲನೇ ಕಂತಿನ ಅನುದಾನಕ್ಕೆ ಉಪಯೋಗಿತ ಪ್ರಮಾಣ ಪತ್ರ(ಯು.ಸಿ.) ವನ್ನು ಸಲ್ಲಿಸಿದ ನಂತರವಷ್ಟೇ ನಿಯಮಗಳನುಸಾರ ಬಾಕಿ ಅನುದಾನವನ್ನು ಬಿಡುಗಡೆ ಮಾಡಲಿದೆ.
ಇ	ಕೇಂದ್ರ ಸರ್ಕಾರದಿಂದ ಬರಬೇಕಾಗಿರುವ ಅನುದಾನದ ನಿರೀಕ್ಷಣೆಯಲ್ಲಿ ರಾಜ್ಯ ಸರ್ಕಾರ ಬಾಕಿ ರೂ.1.25 ಕೋಟಿ ಅನುದಾನದ ಬಿಡುಗಡೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಲೋಕೋಪಯೋಗಿ ಇಲಾಖೆಯು ನೀಡುವ ಕಾಮಗಾರಿಯ ಪ್ರಗತಿ ಆಧಾರದಲ್ಲಿ ರಾಜ್ಯ ಸರ್ಕಾರದ ಪಾಲಿನ ರೂ 1.25 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.
ಈ	ಕೇಂದ್ರ ಸರ್ಕಾರ ಆರ್ಥಿಕ ನೆರವಿನಲ್ಲಿ ಅನುಮೋದನೆಗೊಂಡಿರುವ ಹಾಸನ ನಗರದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿಯು ಕಳೆದ 02 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದು, ಈ ಕಾಮಗಾರಿಗೆ ಚಾಲನೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು:	ರಾಜ್ಯ ಸರ್ಕಾರದ ಲೋಕೋಪಯೋಗಿ ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ, ಇವರು ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದಂತೆ, ಟೆಂಡರನ್ನು ಅಂತಿಮಗೊಳಿಸಿ, ಕಾಮಗಾರಿಯನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ದಿ:06-02-2020 ರ ಪರಿಶೀಲನಾ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ.
ಉ	ಸದರಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣಕ್ಕಾಗಿ ಒಟ್ಟು ರೂ. 8.25 ಕೋಟಿಗಳ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)?	ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯು ಟೆಂಡರ್ ಕರೆದಿದ್ದು, ಟೆಂಡರ್ ಅಂತಿಮಗೊಳಿಸಿ ಕಾರ್ಯಾದೇಶ ನೀಡಿದ ನಂತರ ಟೆಂಡರ್ ನಿಯಮ ಮತ್ತು ಷರತ್ತುಗಳನುಸಾರ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ವೈಎಸ್ ಡಿ-/ಇಬಿಬಿ/107/2020

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಯವರು.

೮ C

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/109/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಖಾದರ್ ಯು.ಟಿ. (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2122ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಖಾದರ್ ಯು.ಟಿ. (ಮಂಗಳೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2122ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry
(ಎಂ. ಉಮೇಶ್ ಶಾಸ್ತ್ರಿ) 07/12/2020
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2122

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಪ್ರೋತ್ಸಾಹಕ್ಕೆ ಕಳೆದ 2 ವರ್ಷಗಳಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು; (ವಿವರಗಳನ್ನು ಒದಗಿಸುವುದು)	ರಾಜ್ಯದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಪ್ರೋತ್ಸಾಹಕ್ಕೆ ಕಳೆದ 2 ವರ್ಷಗಳಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅತ್ಯಾಧುನಿಕ ಕ್ರೀಡಾಂಗಣಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಇದಕ್ಕಾಗಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು;	ಹೌದು. ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ವಿವಿಧ ಕ್ರೀಡಾ ಚಟುವಟಿಕೆಗಳಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಕಾರ್ಯಕ್ರಮದ ಅಂಗವಾಗಿ ತಾಲ್ಲೂಕು ಕೇಂದ್ರಗಳಲ್ಲಿ ಸೂಕ್ತ ನಿವೇಶನ ಹಾಗೂ ಅನುದಾನದ ಲಭ್ಯತೆ ಆಧರಿಸಿ, ನಿವೇಶನದ ಸುತ್ತ ಆವರಣ ಗೋಡೆ/ತಂತಿಬೇಲಿ, ಕ್ರೀಡಾ ಮೈದಾನ ನಿರ್ಮಾಣ, ಕ್ರೀಡಾ ಅಂಕಣಗಳ ನಿರ್ಮಾಣ, ಪೆವಿಲಿಯನ್ ಕಟ್ಟಡ, ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಮತ್ತಿತರ ವ್ಯವಸ್ಥೆ ಕಲ್ಪಿಸಲು ಇಲಾಖೆಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುದಾನ ಹಂಚಿಕೆ ಮಾಡಲಾಗುತ್ತಿದೆ.
ಇ)	ಈ ಯೋಜನೆಗಳಿಗೆ ಅನುದಾನವನ್ನು ಕಾಯ್ದಿರಿಸಲಾಗಿದೆಯೇ? (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಹೌದು. 2020-21 ನೇ ಸಾಲಿನ ಬಂಡವಾಳ ವೆಚ್ಚ ಯೋಜನೆಯಡಿ ಕ್ರೀಡಾ ಮೂಲಸೌಕರ್ಯಗಳಿಗಾಗಿ ಒಟ್ಟು ರೂ. 1140.00 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 21 ಕ್ರೀಡಾ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

ವೈಎಸ್ ಡಿ-/ಇಬಿಬಿ/109/2020

(ಸಹಿ)

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಯವರು.

ಅನುಬಂಧ-1

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಮುಖ ಕಾರ್ಯಕ್ರಮಗಳು

1. **ಕ್ರೀಡಾ ಸಾಧನೆಗೆ ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತರ-ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

ಕ್ರಸ	ವಿವರ	ಚಿನ್ನ (ರೂ ಲಕ್ಷಗಳಲ್ಲಿ)	ಬೆಳ್ಳಿ (ರೂ ಲಕ್ಷಗಳಲ್ಲಿ)	ಕಂಚು (ರೂ ಲಕ್ಷಗಳಲ್ಲಿ)
1	ಒಲಂಪಿಕ್ಸ್	500.00	300.00	200.00
2	ಏಷಿಯನ್ ಗೇಮ್ಸ್	25.00	15.00	8.00
3	ಕಾಮನ್ ವೆಲ್ತ್ ಗೇಮ್ಸ್	25.00	15.00	8.00
4	ವರ್ಲ್ಡ್ ಕಪ್/ಚಾಂಪಿಯನ್ ಶಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು)	5.00	3.00	2.00
5	ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು)	5.00	3.00	2.00
6	ನ್ಯಾಷನಲ್ ಚಾಂಪಿಯನ್ ಶಿಪ್ (ಒಲಂಪಿಕ್ ಕ್ರೀಡೆಗಳಿಗೆ)	2.00	1.00	0.50
7	ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ)	0.50	0.25	0.15
8	ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ)	0.25	0.15	0.10

2. **ಏಕಲವ್ಯ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು.
3. **ಜೀವಮಾನ ಸಾಧನೆ ಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುವುದು.
4. **ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ:** ದೇಸೀ ಗ್ರಾಮೀಣ ಕ್ರೀಡೆಗಳಲ್ಲಿ ವಿಶೇಷ ಸಾಧನೆ ಮಾಡಿದ ರಾಜ್ಯದ ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಹಾಗೂ ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು.
5. **ಕ್ರೀಡಾ ಪೋಷಕ ಪ್ರಶಸ್ತಿ:** ಕ್ರೀಡೆಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಲು ಕ್ರೀಡಾ ಪೋಷಕ ಪ್ರಶಸ್ತಿ ನೀಡಲಾಗುತ್ತಿದೆ.
6. **ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡಲಾಗುತ್ತಿದೆ.
7. **ಕ್ರೀಡಾ ವಿದ್ಯಾರ್ಥಿ ವೇತನ:** ರಾಜ್ಯ ಮಟ್ಟದ ಪದಕ ವಿಜೇತರಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೂ 10,000/- ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
8. **ಮಾಸಾಶನ:** 50 ವರ್ಷ ವಯೋಮಾನ ಮೀರಿದ ಕಷ್ಟ ಪರಿಸ್ಥಿತಿಯಲ್ಲಿರುವ ಮಾಜಿ ಕ್ರೀಡಾಪಟುಗಳಿಗೆ ಮಾಸಾಶನವನ್ನು ಕೆಳಕಾಣಿಸಿದಂತೆ ನೀಡಲಾಗುತ್ತಿದೆ.

ವಿವರ	ಮಾಜಿ ಕುಸ್ತಿ ಪೈಲ್ವಾನರುಗಳಿಗೆ ನೀಡಲಾಗುತ್ತಿರುವ ಮಾಸಾಶನದ ವಿವರ	ಮಾಜಿ ಕುಸ್ತಿಯೇತರ ಕ್ರೀಡಾಪಟುಗಳಿಗೆ ನೀಡಲಾಗುತ್ತಿರುವ ಮಾಸಾಶನದ ವಿವರ
ರಾಜ್ಯ ಮಟ್ಟ	ರೂ 2,500/-	ರೂ 1,000/-
ರಾಷ್ಟ್ರಮಟ್ಟ	ರೂ 3,000/-	ರೂ 1,500/-
ಅಂತರ-ರಾಷ್ಟ್ರೀಯ ಮಟ್ಟ	ರೂ 4,000/-	ರೂ 2,000/-

9. ಯುವ ಸಂಘಗಳಿಗೆ 'ಯುವ ಚೈತನ್ಯ' ಕಾರ್ಯಕ್ರಮದಡಿ ಕ್ರೀಡಾ ಕಿಟ್ ಗಳನ್ನು ವಿತರಿಸಲಾಗುತ್ತಿದೆ.
10. ಪರಿಶಿಷ್ಟ ಜಾತಿ ಮತ್ತು ಪಂಗಡದ ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ 5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ.
11. ಕ್ರೀಡಾ ವಸತಿ ಶಾಲೆ/ನಿಲಯಗಳಲ್ಲಿ ಪ್ರವೇಶ ಪಡೆಯುವ ಪ್ರತಿಭಾವಂತ ಯುವ ಕ್ರೀಡಾಪಟುಗಳಿಗೆ ಉಚಿತ ಊಟೋಪಹಾರ, ವಸತಿ, ಕ್ರೀಡಾ ತರಬೇತಿ ಮತ್ತು ಕ್ರೀಡಾ ಸಮವಸ್ತ್ರ ಒದಗಿಸಲಾಗುತ್ತಿದೆ. ದೈಹಿಕ ಕ್ಷಮತಾ ಪರೀಕ್ಷೆಗಳಲ್ಲಿ ಹಾಗೂ ಕ್ರೀಡಾ ಕೌಶಲ್ಯ ಪರೀಕ್ಷೆ ಆಧಾರಿತವಾಗಿ 5ನೇ ತರಗತಿ ಮೇಲ್ಪಟ್ಟ ಕ್ರೀಡಾಪಟುಗಳಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಪ್ರವೇಶಾವಕಾಶ ಕಲ್ಪಿಸಲಾಗುತ್ತಿದೆ.

12. **<u>ಕ್ರೀಡಾ ಮೂಲಸೌಕರ್ಯಗಳ ಸೃಜನೆ:</u>** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿವೇಶನಗಳಲ್ಲಿ ಕ್ರಿಡಾ ಮೂಲಸೌಕರ್ಯಗಳನ್ನು ಸೃಜಿಸುವ ಮೂಲಕ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆ ಉತ್ತೇಜನ ನೀಡಲಾಗುತ್ತಿದೆ.
13. **<u>ಗರಡಿ ಮನೆ ನಿರ್ಮಾಣ:</u>** ಗ್ರಾಮೀಣ ಕುಸ್ತಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಗರಡಿ ಮನೆ ನಿರ್ಮಾಣ ಮತ್ತು ನವೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ.
14. **<u>ನಮ್ಮೂರ ಶಾಲೆಗೆ ನಮ್ಮ ಯುವಜನರು:</u>** ಈ ಕಾರ್ಯಕ್ರಮದಡಿ ಕ್ರೀಡಾ ಕ್ಷೇತ್ರದಡಿ ಸಾಧನೆ ಮಾಡಿದ ಸರಕಾರಿ ಶಾಲೆಗಳು ಕ್ರೀಡಾ ಚಟುವಟಿಕೆಗಳ ಪ್ರೋತ್ಸಾಹಕ್ಕಾಗಿ ಕ್ರೀಡಾ ಸಾಮಗ್ರಿಗಳನ್ನು ಪೂರೈಸಿಕೊಳ್ಳಲು ಪ್ರೋತ್ಸಾಹಧನ ಮತ್ತು ದೈಹಿಕ ಶಿಕ್ಷಕರ ಗೌರವಧನ ನೀಡಲಾಗುವುದು.
15. **<u>ಯುವ ಕ್ರೀಡಾ ಮಿತ್ರ :</u>** ಗ್ರಾಮೀಣ ಭಾಗಗಳಲ್ಲಿ ಯುವಜನ ಚಟುವಟಿಕೆಗೆ ಉತ್ತೇಜನ ನೀಡಿ, ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಕ್ರೀಡಾ ಸಂಘಗಳಿಗೆ ಕ್ರೀಡಾ ಸಲಕರಣೆ ನೀಡಲಾಗುವುದು.
16. **<u>ಗ್ರಾಮೀಣ ಕ್ರೀಡೋತ್ಸವ:</u>** ಗ್ರಾಮೀಣ ಪ್ರದೇಶದಲ್ಲಿ ದೇಸಿ ಕ್ರೀಡೆಗಳನ್ನು ಸ್ಥಳೀಯ ಮಟ್ಟದಲ್ಲಿ ಪ್ರೋತ್ಸಾಹಿಸಲು ಕಾರ್ಯಕ್ರಮಗಳ ಆಯೋಜನೆ.
17. **<u>ಯುವ ಶಕ್ತಿ ಕೇಂದ್ರ :</u>** ಯುವಜನರ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಲು ಇಲಾಖಾ ಕ್ರೀಡಾಂಗಣಗಳು, ಕ್ರೀಡಾ ವಸತಿ ನಿಲಯಗಳು ಮತ್ತು ಸರ್ಕಾರಿ ಕಾಲೇಜುಗಳಿಗೆ ಜಿಮ್ ಉಪಕರಣಗಳನ್ನು ಒದಗಿಸಲಾಗುವುದು.
18. **<u>ಯುವಜನ ಮೇಳ :</u>** ಯುವಜನರು ಜಾನಪದ ಕಲೆಯನ್ನು ಉಳಿಸಿ, ಬೆಳೆಸಲು ಪೂರಕವಾಗುವಂತೆ 17 ವಿವಿಧ ಪ್ರಕಾರಗಳ ಜನಪದ ಸ್ಪರ್ಧೆಗಳನ್ನು ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ಆಯೋಜಿಸುವುದು.
19. **<u>ಯುವಜನೋತ್ಸವ:</u>** ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿ, ರಾಜ್ಯ ಮಟ್ಟದ ವಿಜೇತರನ್ನು ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ನಡೆಯುವ ರಾಷ್ಟ್ರೀಯ ಯುವಜನೋತ್ಸವಕ್ಕೆ ನಿಯೋಜಿಸುವುದು.
20. ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳಿಗೆ ಕ್ರೀಡಾಕೂಟಗಳ ಆಯೋಜನೆ, ತರಬೇತಿ ಶಿಬಿರಗಳ ಆಯೋಜನೆ ಹಾಗೂ ಕ್ರೀಡಾಕೂಟಗಳಿಗೆ ರಾಜ್ಯ ತಂಡದ ನಿಯೋಜನೆಗೆ ಅನುದಾನ ನೀಡಲಾಗುತ್ತಿದೆ.
21. ಯುವಜನರಿಗೆ ಸಾಹಸ ಕ್ರಿಡಾ ಪ್ರಶಿಕ್ಷಕರಾಗಲು ವಿವಿಧ ಹಂತಗಳ ತರಬೇತಿಯನ್ನು ನೀಡಲಾಗುತ್ತಿದೆ.
22. ರಾಷ್ಟ್ರೀಯ ಸೇವಾ ಯೋಜನೆ ಮೂಲಕ ನಿಮ್ಹಾನ್ಸ್ ಸಂಸ್ಥೆಯ ಸಹಯೋಗದೊಂದಿಗೆ ಯುವಜನರಿಗೆ ಜೀವನ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತಿದೆ.

C

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/114/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ: 07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು.
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ.

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2091ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2091ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2091

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರದಲ್ಲಿ ಸೈಕ್ಲಿಂಗ್ ವೆಲೋಡ್ರೋಂ ನಿರ್ಮಾಣ ಕಾಮಗಾರಿಯನ್ನು ಯಾವ ವರ್ಷ ಪ್ರಾರಂಭಿಸಲಾಗಿದೆ;	ವಿಜಯಪುರದಲ್ಲಿ ಸೈಕ್ಲಿಂಗ್ ವೆಲೋಡ್ರೋಂ ನಿರ್ಮಾಣ ಕಾಮಗಾರಿಯನ್ನು 2015-16ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.
ಆ)	ಅದರ ಪ್ರಗತಿ ಯಾವ ಹಂತದಲ್ಲಿದೆ; ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದ್ದಲ್ಲಿ, ಕಾರಣಗಳೇನು;	ಸೈಕ್ಲಿಂಗ್ ವೆಲೋಡ್ರೋಂ ಕಾಮಗಾರಿಯು 80% ರಷ್ಟು ಪೂರ್ಣಗೊಂಡಿರುತ್ತದೆ. ಈ ಹಂತದಲ್ಲಿ ಕಾಮಗಾರಿ ನಿರ್ವಹಣೆಯಲ್ಲಿ ತಾಂತ್ರಿಕ ದೋಷವು ಕಂಡುಬಂದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಳಿಸಲಾಗಿದ್ದು, ಪ್ರಸ್ತುತ ಸದರಿ ತಾಂತ್ರಿಕ ದೋಷಗಳನ್ನು ಸರಿಪಡಿಸಿ, ಪೂರ್ಣಗೊಳಿಸುವ ನಿಟ್ಟಿನಲ್ಲಿ ಕಾಮಗಾರಿಯನ್ನು ನವೆಂಬರ್-2020 ರಲ್ಲಿ ಪುನರಾರಂಭಿಸಲಾಗಿದೆ.
ಇ)	ನಿರ್ಮಾಣಕ್ಕಾಗಿ ಈಗಾಗಲೇ ಮಾಡಿರುವ ವೆಚ್ಚ ಹಾಗೂ ಇನ್ನೂ ಎಷ್ಟು ಅನುದಾನದ ಅವಶ್ಯಕತೆ ಇರುತ್ತದೆ;	ರೂ.734.72 ಲಕ್ಷ ವೆಚ್ಚದಲ್ಲಿ ವಿಜಯಪುರದಲ್ಲಿ ಸೈಕ್ಲಿಂಗ್ ವೆಲೋಡ್ರೋಂ ಕಾಮಗಾರಿ ಕೈಗೊಳ್ಳಲು ಕಾರ್ಯಾದೇಶ ನೀಡಲಾಗಿದ್ದು, ಇದುವರೆಗೆ ಒಟ್ಟು ರೂ.406.70 ಲಕ್ಷ ವೆಚ್ಚ ಭರಿಸಲಾಗಿದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.328.00 ಲಕ್ಷಗಳ ಅವಶ್ಯಕತೆ ಇರುತ್ತದೆ.
ಈ)	ಅವಶ್ಯಕ ಅನುದಾನ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಕಾಮಗಾರಿಯಲ್ಲಿನ ತಾಂತ್ರಿಕ ದೋಷವನ್ನು ಗುತ್ತಿಗೆದಾರರು ಸರಿಪಡಿಸಿ ವೇಲೋಡ್ರೋಮ್ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕಾಮಗಾರಿಯು ನವೆಂಬರ್-2020ರಲ್ಲಿ ಪುನರಾರಂಭಿಸಲಾಗಿದ್ದು, ಅಗತ್ಯತೆಗನುಗುಣವಾಗಿ ಅವಶ್ಯಕ ಅನುದಾನವನ್ನು ಒದಗಿಸಲಾಗುವುದು.
ಉ)	ಯಾವ ನಿರ್ಧಿಷ್ಟ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸೈಕ್ಲಿಂಗ್‌ಗಳಿಗೆ ಅನುಕೂಲ ಮಾಡಿಕೊಡಲಾಗುವುದು?	ಕಾಮಗಾರಿಯನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ.

ವೈಎಸ್ ಡಿ- ಇಬಿಬಿ/114/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/106/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ: 07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:681ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:681ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry

(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 681

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸೊರಬ ತಾಲ್ಲೂಕಿನಲ್ಲಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ ವಾರ್ಷಿಕ ಕ್ರೀಡಾಕೂಟಗಳನ್ನು ನಡೆಸಲು ಸುಸಜ್ಜಿತವಾದ ಕ್ರೀಡಾಂಗಣಗಳು ಗ್ರಾಮಾಂತರ ಪ್ರದೇಶಗಳಲ್ಲಿ, ಹೋಬಳಿ ಮಟ್ಟದಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಆದರೆ, ಈಗಾಗಲೇ ಸೊರಬ ತಾಲ್ಲೂಕು ಕೇಂದ್ರದಲ್ಲಿ 9.36 ಎಕರೆ ನಿವೇಶನದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗಿದ್ದು, ಸದರಿ ಕ್ರೀಡಾಂಗಣದಲ್ಲಿ 200ಮೀ. ಅಥ್ಲೆಟಿಕ್ ಅಂಕಣ, ಖೋ-ಖೋ, ಕಬಡ್ಡಿ, ವಾಲಿಬಾಲ್, ಫುಟ್ಬಾಲ್ ಕ್ರೀಡಾಂಗಣಗಳು, ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆ, ವಿದ್ಯುತ್ ಸಂಪರ್ಕ ಮತ್ತು ಜಿಮ್ ಸೌಲಭ್ಯಗಳನ್ನು ಒಳಗೊಂಡಿದ್ದು, ಕ್ರೀಡಾಪಟುಗಳ ಬಳಕೆಯಲ್ಲಿರುತ್ತದೆ. ಅಲ್ಲದೇ, ಸದರಿ ಕ್ರೀಡಾಂಗಣದಲ್ಲಿ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಸಮುದಾಯಕ್ಕೆ ವಾರ್ಷಿಕ ಕ್ರೀಡಾಕೂಟಗಳನ್ನು ಆಯೋಜಿಸಲಾಗುತ್ತಿದೆ.
ಆ)	ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಹೋಬಳಿಗೊಂದು ಕ್ರೀಡಾಂಗಣವನ್ನು ನಿರ್ಮಾಣ ಮಾಡಲಾಗುವುದೇ?	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಸ್ತುತ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಾಣ ಹಾಗೂ ಅಭಿವೃದ್ಧಿಪಡಿಸಲು ಮೊದಲ ಆದ್ಯತೆ ನೀಡಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಹೋಬಳಿ ಮಟ್ಟದ ಕ್ರೀಡಾಂಗಣಗಳ ಅಭಿವೃದ್ಧಿ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವುದಿಲ್ಲ.

ವೈಎಸ್ ಡಿ-/ಇಬಿಬಿ/106/2020

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಯವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/116/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್ .ಡಿ. ಕೋಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2076ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2076ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2076

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ. ಕೋಟೆ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮೀಣ ಮಟ್ಟದಲ್ಲಿ ಒದಗಿಸುವ ಕ್ರೀಡಾ ಮೂಲಭೂತ ಸೌಲಭ್ಯ/ ಸವಲತ್ತುಗಳು ಯಾವುವು; ಈ ಸವಲತ್ತು/ ಸೌಲಭ್ಯಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು (ವಿವರ ನೀಡುವುದು);	ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಹೊರಾಂಗಣ ಕ್ರೀಡಾಂಗಣಗಳು, ಒಳಾಂಗಣ ಕ್ರೀಡಾಂಗಣಗಳು, ಈಜುಕೊಳಗಳು ಮತ್ತಿತರ ಕ್ರೀಡಾ ಹಾಗೂ ಯುವಜನಾಭಿವೃದ್ಧಿಗೆ ಅಗತ್ಯವಾದ ಮೂಲಸೌಕರ್ಯಗಳನ್ನು ಸೃಜಿಸಲಾಗುತ್ತಿದೆ. ಜಿಲ್ಲಾ ಪಂಚಾಯತ್ ವಲಯದ ಕಿರು ಕಾಮಗಾರಿಗಳು ಹಾಗೂ ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ಗ್ರಾಮೀಣ ಆಟದ ಮೈದಾನಗಳ ನಿರ್ಮಾಣ ಹಾಗೂ ಕ್ರೀಡಾಂಗಣಗಳ ನಿರ್ವಹಣೆ ಕೈಗೊಳ್ಳಲಾಗುತ್ತಿದೆ. ರಾಜ್ಯ ವಲಯದ ಬಂಡವಾಳ ವೆಚ್ಚ ಕಾರ್ಯಕ್ರಮದಡಿ ಹೊರಾಂಗಣ ಕ್ರೀಡಾಂಗಣಗಳು, ಒಳಾಂಗಣ ಕ್ರೀಡಾಂಗಣಗಳು ಮತ್ತು ಈಜುಕೊಳಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.
ಆ)	ಕ್ರೀಡಾಪಟುಗಳಿಗೆ ನೀಡುವಂತಹ ಪ್ರಶಸ್ತಿಗಳು ಅರ್ಹ ಕ್ರೀಡಾ ಸಾಧಕರಿಗೆ ದೊರಕದೇ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅರ್ಹ ಕ್ರೀಡಾ ಸಾಧಕರನ್ನು ಗುರುತಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;	ಬಂದಿರುವುದಿಲ್ಲ.
ಇ)	ಗ್ರಾಮೀಣ ಮಟ್ಟದಲ್ಲಿರುವ ಹಾಡಿಗಳು, ತಾಂಡಾಗಳು, ಕಾಲೋನಿಗಳಲ್ಲಿರುವ ಪ್ರಾದೇಶಿಕ ಕ್ರೀಡೆಗಳನ್ನು ಗುರುತಿಸುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಗ್ರಾಮೀಣ ಮಟ್ಟದಲ್ಲಿರುವ ಕ್ರೀಡೆಗಳನ್ನು ಗುರುತಿಸಿ, ಅಭಿವೃದ್ಧಿಪಡಿಸುವಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?	ಹೌದು. ಅನುದಾನದ ಕೊರತೆ ಹಾಗೂ ತಾಲ್ಲೂಕು ಮಟ್ಟ ಹಾಗೂ ಕೆಳಹಂತದಲ್ಲಿ ಇಲಾಖಾ ಕಛೇರಿ ಮತ್ತು ಸಿಬ್ಬಂದಿ ಇಲ್ಲದಿರುವುದರಿಂದ ಗ್ರಾಮೀಣ ಮಟ್ಟದಲ್ಲಿರುವ ಹಾಡಿ, ತಾಂಡಾ ಮತ್ತಿತರ ಸ್ಥಳಗಳ ಪ್ರಾದೇಶಿಕ ಕ್ರೀಡೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ಕಷ್ಟಸಾಧ್ಯವಾಗಿದೆ. ಲಭ್ಯ ಅನುದಾನ ಹಾಗೂ ಸಿಬ್ಬಂದಿಗಳ ಮಿತಿಯಲ್ಲಿ ಇಲಾಖೆಯು ಗ್ರಾಮೀಣ ಕ್ರೀಡೆಗಳನ್ನು ಉತ್ತೇಜಿಸಲು ಕೆಳಕಾಣಿಸಿದ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು, ಅನುಷ್ಠಾನಗೊಳಿಸುತ್ತಿದೆ:- • ರಾಜ್ಯದ ಪಾರಂಪರಿಕ ಮಣ್ಣಿನ ಕುಸ್ತಿ ಕ್ರೀಡೆಯನ್ನು ಉತ್ತೇಜಿಸಲು ವಾರ್ಷಿಕ ರೂ.200.00 ಲಕ್ಷ ವೆಚ್ಚದಲ್ಲಿ **'ಕರ್ನಾಟಕ ಕುಸ್ತಿ ಹಬ್ಬ'** ಆಯೋಜಿಸಲಾಗುತ್ತಿದೆ. ಫೆಬ್ರುವರಿ-2020 ರಲ್ಲಿ ಧಾರವಾಡದಲ್ಲಿ ಕರ್ನಾಟಕ ಕುಸ್ತಿ ಹಬ್ಬವನ್ನು ಯಶಸ್ವಿಯಾಗಿ ಆಯೋಜಿಸಲಾಗಿದ್ದು, ರೂ.75.04 ಲಕ್ಷಗಳನ್ನು ನಗದು ಬಹುಮಾನವಾಗಿ ವಿಜೇತ ಕುಸ್ತಿಪಟುಗಳಿಗೆ ವಿತರಿಸಲಾಗಿದೆ.

		• ಸ್ಥಳೀಯ ಗ್ರಾಮೀಣ ಕ್ರೀಡೆಗಳನ್ನು ಗುರುತಿಸಿ, ಸದರಿ ಕ್ರೀಡೆಗಳನ್ನು ಆಯೋಜಿಸಲು ಅನುವಾಗುವಂತೆ **'ಗ್ರಾಮೀಣ ಕ್ರೀಡೋತ್ಸವ'** ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಪ್ರತಿ ತಾಲ್ಲೂಕಿಗೆ ರೂ.1.50 ಲಕ್ಷ ಅನುದಾನ ಒದಗಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಅನುದಾನದ ಕೊರತೆ ಹಿನ್ನೆಲೆಯಲ್ಲಿ ಸದರಿ ಕಾರ್ಯಕ್ರಮಕ್ಕೆ ಯಾವುದೇ ಅನುದಾನ ಹಂಚಿಕೆ ಮಾಡಿರುವುದಿಲ್ಲ. • ಗ್ರಾಮೀಣ ಕ್ರೀಡೆಗಳಾದ ಗುಂಡು ಎತ್ತುವುದು, ಮಣ್ಣಿನ ಕುಸ್ತಿ, ಕಂಬಳ, ಮಲ್ಲಕಂಭ, ದೊಣ್ಣೆವರಸೆ, ಕಬಡ್ಡಿ, ಖೋ-ಖೋ ಮತ್ತಿತರ ಗ್ರಾಮೀಣ ಕ್ರೀಡೆಗಳಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ **'ಕರ್ನಾಟಕ ಕ್ರೀಡಾ ರತ್ನ'** ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. • ಎಲ್ಲಾ ಜಿಲ್ಲೆಗಳಿಗೆ ತಲಾ ಎರಡು ಅಂತರ-ರಾಷ್ಟ್ರೀಯ ಗುಣಮಟ್ಟದ ಕಬಡ್ಡಿ ಮ್ಯಾಟ್‌ಗಳನ್ನು ಒದಗಿಸಲಾಗಿದ್ದು, ಸಾರ್ವಜನಿಕರ ಬಳಕೆಯಲ್ಲಿದೆ.

ವೈಎಸ್ ಡಿ-/ಇಬಿಬಿ/116/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/112/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ: 07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀಮತಿ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2095ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2095ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2095

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿಯ ಪವನಾಂಜನೆಯ ಎಂಬ ಬಿರುದು ಪಡೆದ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಭಾರತದ ಪ್ರಥಮ ಕ್ರೀಡಾಪಟು ಎಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ಉಲ್ಲೇಖಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ, ದಿ. ಶ್ರೀ ಪಡೆಪ್ಪಾ ಇವರ ಹೆಸರನ್ನು ತಿದ್ದುಪಡಿ ಮಾಡಿ ದಾಖಲಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ ಮಾಡಲಾಗುವುದು.	ಬೆಳಗಾವಿಯ ಪವನಾಂಜನೆಯ ಎಂಬ ಬಿರುದು ಪಡೆದ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಭಾರತದ ಪ್ರಥಮ ಕ್ರೀಡಾಪಟು ಎಂದು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಇತಿಹಾಸಕಾರರ ಸಂಘಟನೆ ಸ್ಮರಣಿಕೆಯಲ್ಲಿ ಉಲ್ಲೇಖಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ)	ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅಗತ್ಯ ತಿದ್ದುಪಡಿಗೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.	ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.
ಇ)	ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿಯ ಒಲಿಂಪಿಕ್ ಕ್ರೀಡಾಕೂಟ ಮುಂದಕ್ಕೆ ಹೋಗಿದ್ದು, ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರ ಸಾಧನೆಗೆ 100 ವರ್ಷಗಳು ತುಂಬಿ ಶತಮಾನದ ಸಂಭ್ರಮೋತ್ಸವ ಆಚರಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ ಯಾವಾಗ ಆಚರಿಸಲಾಗುವುದು.	ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು
ಈ	ಈವರೆಗೆ ಪವನಾಂಜನೆಯ ದಿ. ಶ್ರೀ ಪಡೆಪ್ಪಾ ಧರೆಪ್ಪಾ ಚೌಗುಲೆ ಇವರು ಮಾಡಿರುವ ಸಾಧನೆ ಗುರುತಿಸುವ ಕಾರ್ಯವನ್ನು ಮಾಡಲಾಗುವುದೇ? (ವಿವರ ನೀಡುವುದು)	ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ವೈಎಸ್ ಡಿ-/ಇಬಿಬಿ/112/2020

(ಸಹಿ)

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

C

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/117/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1977ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1977ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1977

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಮದುರ್ಗ ತಾಲ್ಲೂಕಿನ ಕಂಕನವಾಡಿ ಗ್ರಾಮ ಸರ್ವೆ ನಂ.7 ಮತ್ತು 8ಎ ರಲ್ಲಿನ 15 ಎಕರೆ 19 ಗುಂಟೆ ಜಮೀನಿನಲ್ಲಿ 8 ಎಕರೆ ಜಾಗವನ್ನು ಕರ್ನಾಟಕ ಗೃಹ ಮಂಡಳಿಯಿಂದ ಹಸ್ತಾಂತರಗೊಳಿಸಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ;	ಹೌದು. ರಾಮದುರ್ಗ ತಾಲ್ಲೂಕಿನ ಕಂಕನವಾಡಿ ಗ್ರಾಮ ಸರ್ವೆ ನಂ.7/1 ರಲ್ಲಿನ 10 ಎಕರೆ 19 ಗುಂಟೆ ನಿವೇಶನವನ್ನು ಕರ್ನಾಟಕ ಗೃಹ ಮಂಡಳಿಯು ಉಚಿತವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಿದಲ್ಲಿ, ಸದರಿ ನಿವೇಶನದಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.
ಆ)	ರಾಮದುರ್ಗ ತಾಲ್ಲೂಕಿನಲ್ಲಿ ಕ್ರೀಡಾಪಟುಗಳ ಅನುಕೂಲಕ್ಕಾಗಿ ಶೀಘ್ರವಾಗಿ ಕ್ರೀಡಾಂಗಣ ನಿರ್ಮಿಸಬೇಕಾದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಕ್ರೀಡಾಂಗಣ ಇಲಾಖೆ ವ್ಯಾಪ್ತಿಗೆ ಕರ್ನಾಟಕ ಗೃಹ ಮಂಡಳಿಯಿಂದ ಹಸ್ತಾಂತರಗೊಳಿಸುವ ಕಾರ್ಯವನ್ನು ಪೂರ್ಣಗೊಳಿಸಲಾಗುವುದು (ವಿವರ ನೀಡುವುದು);	ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಕಂಕನವಾಡಿ ಗ್ರಾಮದ ಕರ್ನಾಟಕ ಗೃಹ ಮಂಡಳಿ, ಬೆಳಗಾವಿ ಇವರ ಹೆಸರಿನಲ್ಲಿನ ರಿ.ಸ. ನಂ.7/1 ರಲ್ಲಿನ 10 ಎಕರೆ 19 ಗುಂಟೆ ಖಾಲಿ ಜಾಗವನ್ನು ಎಕರೆ ಒಂದಕ್ಕೆ ರೂ.24,53,117/- ರಂತೆ ಒಟ್ಟು ರೂ.2,56,96,400/- ಗಳನ್ನು ಕರ್ನಾಟಕ ಗೃಹ ಮಂಡಳಿ, ಬೆಳಗಾವಿ ಇವರಿಗೆ ಪಾವತಿಸಿ, ಖರೀದಿಸುವಂತೆ ಕರ್ನಾಟಕ ಗೃಹ ಮಂಡಳಿಯು ತಿಳಿಸಿರುತ್ತದೆ. ಆದರೆ, ಪ್ರಸ್ತುತ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಅನುದಾನದ ಕೊರತೆಯಿರುವುದರಿಂದ ಹಾಗೂ ಸದರಿ ನಿವೇಶನದಲ್ಲಿ ಸಾರ್ವಜನಿಕರ ಬಳಕೆಗಾಗಿ ಕ್ರೀಡಾಂಗಣವನ್ನು ನಿರ್ಮಿಸಲು ಉದ್ದೇಶಿಸಿರುವುದರಿಂದ, ಉಚಿತವಾಗಿ ನಿವೇಶನವನ್ನು ಇಲಾಖೆಗೆ ಹಸ್ತಾಂತರ ಮಾಡುವಂತೆ ಕರ್ನಾಟಕ ಗೃಹ ಮಂಡಳಿ, ಬೆಳಗಾವಿ ಇವರನ್ನು ಕೋರಲಾಗಿದೆ.

ಈ)	ರಾಮದುರ್ಗ ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಿಸಲು ಯಾವುದಾದರೂ ಕಾಲಮಿತಿ ನಿಗದಿಪಡಿಸಿದೆಯೇ?	ಕ್ರೀಡಾಂಗಣ ನಿರ್ಮಾಣ ಮಾಡಲು ಅವಶ್ಯವಿರುವ ಸೂಕ್ತ ನಿವೇಶನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರವಾದ ನಂತರ ಅನುದಾನದ ಲಭ್ಯತೆ ಆಧರಿಸಿ ಆದ್ಯತೆ ಮೇರೆಗೆ ಕ್ರೀಡಾಂಗಣ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು.

ವೈಎಸ್ ಡಿ-/ಇಬಿಬಿ/117/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/111/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಯತೀಂದ್ರ ಸಿದ್ದರಾಮಯ್ಯ ಡಾ|| (ವರುಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2109ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಯತೀಂದ್ರ ಸಿದ್ದರಾಮಯ್ಯ ಡಾ|| (ವರುಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2109ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2109

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಡಾ|| ಯತೀಂದ್ರ ಸಿದ್ದರಾಮಯ್ಯ (ವರುಣ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ).	ಕಳೆದ ಮೂರು ವರ್ಷಗಳಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಗ್ರಾಮಗಳಲ್ಲಿ ಗರಡಿ ಮನೆಗಳನ್ನು ಮಂಜೂರು ಮಾಡಿದ್ದು, ಅನುದಾನದ ಕೊರತೆಯಿಂದ ಕಾಮಗಾರಿಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು; (ಮಾಹಿತಿ ಒದಗಿಸುವುದು)	ಬಂದಿದೆ. 2020-21ನೇ ಸಾಲಿನಲ್ಲಿ ಅನುದಾನದ ಕೊರತೆ ಹಿನ್ನೆಲೆಯಲ್ಲಿ ಯಾವುದೇ ಗರಡಿ ಮನೆಗಳಿಗೆ ಅನುದಾನ ಹಂಚಿಕೆಯನ್ನು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಿರುವುದಿಲ್ಲ. ಮುಂದಿನ ಸಾಲಿನಲ್ಲಿ ಅನುದಾನದ ಲಭ್ಯತೆ ಆಧರಿಸಿ, ಸೂಕ್ತ ಅನುದಾನ ಒದಗಿಸಲು ಆದ್ಯತೆ ಮೇಲೆ ಪರಿಗಣಿಸಲಾಗುವುದು.
ಆ).	ಈ ಸಾಲಿನಲ್ಲಿ ಎಷ್ಟು ಗರಡಿ ಮನೆಗಳನ್ನು ಹಾಗೂ ಕ್ರೀಡಾಂಗಣವನ್ನು ಮಂಜೂರು ಮಾಡಲಾಗಿದೆ; ಎಷ್ಟು ಅನುದಾನವನ್ನು ವೆಚ್ಚ ಮಾಡಲಾಗಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)	2020-21ನೇ ಸಾಲಿನಲ್ಲಿ ಅನುದಾನದ ಕೊರತೆ ಹಿನ್ನೆಲೆಯಲ್ಲಿ ಯಾವುದೇ ಗರಡಿ ಮನೆಗಳ ನಿರ್ಮಾಣ ಯೋಜನೆಯನ್ನು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. 2020-21 ನೇ ಸಾಲಿನಲ್ಲಿ ವಿವಿಧ ಕ್ರೀಡಾಂಗಣಗಳ ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಿಸಿದಂತೆ 21 ಕಾಮಗಾರಿಗಳನ್ನು ಒಟ್ಟು ರೂ.11.40 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆ.

ವೈಎಸ್ ಡಿ-/ಇಬಿಬಿ/111/2020

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಯವರು.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ - ಇಬಿಬಿ / 110 / 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 08.12.2020.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2114ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2114ರ 25 ಉತ್ತರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

Received
8/12/2020

ತಮ್ಮ ನಂಬುಗೆಯ,

M. Umesh Shastry 08/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2114

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಕೈಗೊಂಡಿರುವ ಯೋಜನೆ ಮತ್ತು ಕಾಮಗಾರಿಗಳು ಯಾವುವು; ಯೋಜನೆ ಮತ್ತು ಕಾಮಗಾರಿಗಳಿಗೆ ಸರ್ಕಾರ ಹಂಚಿಕೆ ಮಾಡಿರುವ ಅನುದಾನ ಎಷ್ಟು; ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಈ ಕೆಳಕಂಡಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ:-

2015-16ನೇ ಸಾಲು

ಭಾಲ್ಕಿಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣವನ್ನು 41.15 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಿದ್ದು, ನಿರ್ಮಾಣ ಸಂಸ್ಥೆಯಾದ ನಿರ್ಮಿತಿ ಕೇಂದ್ರ, ಬೀದರ್ ಜಿಲ್ಲೆ ಇವರಿಗೆ ರೂ. 20.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2016-17ನೇ ಸಾಲು

ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚವಾದ ಅನುದಾನ (ರೂ. ಲಕ್ಷಗಳಲ್ಲಿ)
1. ಬಸವಕಲ್ಯಾಣ ತಾಲ್ಲೂಕು ಕ್ರೀಡಾಂಗಣದ ದುರಸ್ತಿ ಕಾಮಗಾರಿ ಮತ್ತು ಸುಣ್ಣ-ಬಣ್ಣ ಮಾಡುವುದು.	2.00	2.00
2. ಭಾಲ್ಕಿ ತಾಲ್ಲೂಕು ಕ್ರೀಡಾಂಗಣದ ದುರಸ್ತಿ ಕಾಮಗಾರಿ ಮತ್ತು ಸುಣ್ಣ-ಬಣ್ಣ ಮಾಡುವುದು.	2.00	2.00
3. ಹುಮನಾಬಾದ ತಾಲ್ಲೂಕು ಕ್ರೀಡಾಂಗಣದ ದುರಸ್ತಿ ಕಾಮಗಾರಿ ಮತ್ತು ಸುಣ್ಣ-ಬಣ್ಣ ಮಾಡುವುದು.	2.00	2.00
ಒಟ್ಟು	**6.00**	**6.00**

2017-18ನೇ ಸಾಲು

ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚವಾದ ಅನುದಾನ (ರೂ. ಲಕ್ಷಗಳಲ್ಲಿ)
1. ಹುಮನಾಬಾದ ತಾಲ್ಲೂಕು ಕ್ರೀಡಾಂಗಣದಲ್ಲಿ ಪುರುಷ ಮತ್ತು ಸ್ತ್ರೀಯರ ಶೌಚಾಲಯ	13.00	13.00

ಹಾಗೂ ಗ್ರೌಂಡ್ ದುರಸ್ತಿ.		
2. ಔರಾದ ತಾಲ್ಲೂಕು ಕ್ರೀಡಾಂಗಣದ ಕಾಂಪೌಂಡು ಗೋಡೆ ನಿರ್ಮಾಣ	5.00	5.00
3. ಬಸವಕಲ್ಯಾಣ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣದ ಛಾವಣಿ ರಿಪೇರಿ	3.00	3.00
4. ಒಳಾಂಗಣ ಕ್ರೀಡಾಂಗಣ, ಕ್ರೀಡಾ ವಸತಿ ನಿಲಯ ಮತ್ತು ಈಜುಕೊಳಗಳಿಗೆ ಸುಣ್ಣ ಬಣ್ಣ ಮಾಡುವುದು.	4.00	4.00
5. ಒಳಾಂಗಣ ಕ್ರೀಡಾಂಗಣದ ಷಟಲ್ ಬ್ಯಾಡ್ಮಿಂಟನ್ ಅಂಕಣದ ಲೈಟ್ ದುರಸ್ತಿ	0.87	0.87
ಒಟ್ಟು	**25.87**	**25.87**

<u>2018-19ನೇ ಸಾಲು</u>

ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)
1. ಬೀದರ್ ತಾಲ್ಲೂಕಿನ ಬಹುಮನಿ ಕ್ಲಬ್‌ನಲ್ಲಿ ಗರಡಿ ಮನೆ ನಿರ್ಮಾಣ.	10.00	10.00
2. ಹುಮನಾಬಾದ ತಾಲ್ಲೂಕು ಕ್ರೀಡಾಂಗಣದಲ್ಲಿ ಕಾಂಪೌಂಡು, ಗಾರ್ಡ್ ರೂಂ ನಿರ್ಮಾಣ.	9.00	9.00
3. ಬೀದರ್ ಒಳಾಂಗಣ ಕ್ರೀಡಾಂಗಣದ ಹಿಂಭಾಗಕ್ಕೆ ರಫ್ ಪರಸಿ, ವಾಟರ್ ಪೈಪ್ ಲೈನ್ ಮತ್ತು ಕ್ರೀಡಾ ವಸತಿ ಶಾಲೆ ಹೊಸ ಕೋಣೆ, ಒಳಾಂಗಣ ಕ್ರೀಡಾಂಗಣಕ್ಕೆ ಸುಣ್ಣ ಬಣ್ಣ ಬಳಿಯುವುದು.	5.00	5.00
4. ಔರಾದ ತಾಲ್ಲೂಕು ಕ್ರೀಡಾಂಗಣದ ಕಾಂಪೌಂಡು ಗೋಡೆ, ಬೋರ್ ವೆಲ್ ಕೊರಸಿ ನೀರಿನ ಪೈಪ್ ಲೈನ್ ಅಳವಡಿಸುವುದು.	5.00	5.00
5. ಬಸವಕಲ್ಯಾಣ ತಾಲ್ಲೂಕು ಕ್ರೀಡಾಂಗಣದ ಒಳಾಂಗಣ ಕ್ರೀಡಾಂಗಣ ಛಾವಣಿ ರಿಪೇರಿ, ಕುಡಿಯುವ ನೀರಿನ	3.00	3.00

		ವ್ಯವಸ್ಥೆ ಮತ್ತು ಇನ್ನಿತರ ದುರಸ್ತಿ ಕಾಮಗಾರಿ		
		6. ಬೀದರ್ ತಾಲ್ಲೂಕಿನ ಕಮಠಾಣಾ ಗ್ರಾಮದಲ್ಲಿ ಪ್ರಾದೇಶಿಕ ಯುವಕ ಕೇಂದ್ರ ಸ್ಥಾಪಿಸಲು ಕಟ್ಟಡ ನಿರ್ಮಾಣ	5.00	5.00
		7. ಒಳಾಂಗಣ ಕ್ರೀಡಾಂಗಣ ಹಿಂದುಗಡೆ ಸಾದ ಪರಸಿ ನೆಲಹಾಸು ಅಳವಡಿಸುವುದು	2.50	2.50
		ಒಟ್ಟು	**39.50**	**39.50**

2019-20ನೇ ಸಾಲು

ಕಾಮಗಾರಿ ವಿವರ	ಹಂಚಿಕೆ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)
ಬೀದರ್ ನಗರದ ನೆಹರೂ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಗ್ಯಾಲರಿ, ಒಳಾಂಗಣ ಮತ್ತು ಈಜುಕೊಳ ಅಭಿವೃದ್ಧಿ	100.00	75.00
ಒಟ್ಟು	**100.00**	**75.00**

ಆ)	ಸದರಿ ಯೋಜನೆ ಮತ್ತು ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ಒದಗಿಸುವುದು)	ಬಂದಿರುವುದಿಲ್ಲ.
ಇ)	ಹಲವು ಕಾಮಗಾರಿಗಳಿಗೆ ಮಂಜೂರಾದ ಅನುದಾನ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು)	ಬಂದಿರುವುದಿಲ್ಲ

ವೈಎಸ್ ಡಿ-/ಇಬಿಬಿ/110/2020

(ಸಹಿ)

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ.

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/108/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ:07.12.2020.

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಘುಮೂರ್ತಿ ಟಿ. ಚಳ್ಳಕೆರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2165ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಘುಮೂರ್ತಿ ಟಿ. ಚಳ್ಳಕೆರೆ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2165ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020
(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2165

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಶ್ರೀ ರಘುಮೂರ್ತಿ ಟಿ. (ಚಳ್ಳಕೆರೆ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರಸ	ಪ್ರಶ್ನೆ	ಉತ್ತರ
ಅ)	ಚಳ್ಳಕೆರೆ ಪಟ್ಟಣದಲ್ಲಿರುವ ಕ್ರೀಡಾಂಗಣ ಅಭಿವೃದ್ಧಿಗೆ ರೂ.190.68 ಲಕ್ಷ ಅನುದಾನ ನೀಡಲು ಅನುಮೋದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಕ್ರೀಡಾಂಗಣವನ್ನು ಅಭಿವೃದ್ಧಿ ಪಡಿಸಲು ಈವರೆವಿಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಚಳ್ಳಕೆರೆ ತಾಲ್ಲೂಕು ಕ್ರೀಡಾಂಗಣಕ್ಕೆ ಜಿ.ಐ.ಶೀಟ್ ರೂಫ್, ಚರಂಡಿ ಹಾಗೂ ಟ್ರ್ಯಾಕ್ ನಿರ್ಮಾಣ, ಆವರಣಗೋಡೆ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 166 ಯುಸೇಕ್ರೀ 2018, ದಿನಾಂಕ: 23.03.2018 ರನ್ವಯ ರೂ.190.68 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅನುದಾನದ ಕೊರತೆ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗೆ ಇದುವರೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
ಇ)	ಚಳ್ಳಕೆರೆ ನಗರದಲ್ಲಿ ಹೊಸದಾಗಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಿಸಲು ರೂ.50.00 ಲಕ್ಷವನ್ನು ಬಂಡವಾಳ ವೆಚ್ಚದಲ್ಲಿ ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಾರಂಭವಾಗಿರುವುದರಿಂದ ಅದನ್ನು ಪೂರ್ಣಗೊಳಿಸಲು ಉಳಿದ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು);	ಮೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆ.ಆರ್.ಐ.ಡಿ.ಎಲ್.) ರವರಿಗೆ ರೂ.50.00 ಲಕ್ಷಗಳ ಪೂರ್ಣ ಅನುದಾನವನ್ನು ದಿನಾಂಕ:25.02.2017ರಂದು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸ್ತುತ ಕ್ರೀಡಾಂಗಣದ ನೆಲಸಮತಟ್ಟು ಕಾಮಗಾರಿಯನ್ನು ನಿರ್ಮಾಣ ಏಜೆನ್ಸಿ ಕೈಗೆತ್ತಿಕೊಂಡಿದೆ. ಉಳಿದಂತೆ ಕಾಂಪೌಂಡ್ ಗೋಡೆ ನಿರ್ಮಾಣ, 400 ಮೀ. ಅಥ್ಲೆಟಿಕ್ ಟ್ರ್ಯಾಕ್, ವಾಲಿಬಾಲ್, ಖೋ-ಖೋ, ಕಬಡ್ಡಿ ಅಂಕಣ ನಿರ್ಮಾಣ ಹಾಗೂ ಇತರೆ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ವೈಎಸ್ ಡಿ-/ಇಬಿಬಿ/108/2020

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿಯವರು.

C

ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್ ಡಿ- ಇಬಿಬಿ/113/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು. ದಿನಾಂಕ: 07.12.2020.

ಇಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು.

ಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2093ಕ್ಕೆ ಉತ್ತರ ಕಳುಹಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2093ಕ್ಕೆ ಉತ್ತರದ 25 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

M. Umesh Shastry 07/12/2020

(ಎಂ. ಉಮೇಶ್ ಶಾಸ್ತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2093

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರದ ಡಾ: ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಿಸಲಾಗುತ್ತಿದೆಯೇ;	ಹೌದು.
ಆ)	ಹಾಗಿದ್ದಲ್ಲಿ, ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ;	ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದೆ.
ಇ)	ಇದಕ್ಕಾಗಿ ತಗಲುವ ವೆಚ್ಚ ಎಷ್ಟು ಹಾಗೂ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?	ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಕಾಮಗಾರಿಯನ್ನು ರೂ.631.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಯು ಜನವರಿ-2021ರ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

ವೈಎಸ್ ಡಿ-/ಇಬಿಬಿ/113/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1944

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020

ಸದಸ್ಯರ ಹೆಸರು : ಡಾ|| ಅಜಯ್ ಧರ್ಮ ಸಿಂಗ್ (ಜೇವರ್ಗಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಲಬುರಗಿ ಜಿಲ್ಲೆಯಲ್ಲಿ ಕ್ರೀಡಾಪಟುಗಳ ಸಾಮರ್ಥ್ಯ ಹೆಚ್ಚಿಸಿ ಅವರನ್ನು ಉತ್ತೇಜಿಸಲು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ವತಿಯಿಂದ ಅಂತರಾಷ್ಟ್ರೀಯ ಕ್ರೀಡಾ ಸಂಕೀರ್ಣ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;	ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ವತಿಯಿಂದ ಅಂತರಾಷ್ಟ್ರೀಯ ಕ್ರೀಡಾ ಸಂಕೀರ್ಣ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಅದಕ್ಕೆ ತಗಲುವ ವೆಚ್ಚವೆಷ್ಟು; (ಸಂಪೂರ್ಣ ವಿವರ ನೀಡುವುದು)	ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.
ಇ)	ಇಲ್ಲಿಯವರೆಗೆ ಕೈಗೊಂಡಿರುವ ಯೋಜನೆಗಳ ಬಗ್ಗೆ ಜಿಲ್ಲಾವಾರು ವಿವರ ಒದಗಿಸುವುದು?	

ವೈಎಸ್ ಡಿ-ಇಬಿಬಿ/118/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1992

ಉತ್ತರಿಸಬೇಕಾಗಿದ್ದ ದಿನಾಂಕ : 30.09.2020.

ಸದಸ್ಯರ ಹೆಸರು : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ತೀರ್ಥಹಳ್ಳಿ ಪಟ್ಟಣದ ಕ್ರೀಡಾಂಗಣವು ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಈ ಸಾಲಿನಲ್ಲಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುವುದೇ;	ತೀರ್ಥಹಳ್ಳಿ ತಾಲ್ಲೂಕು ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಹಾಗೂ ವಿವಿದೋದ್ದೇಶ ಒಳಾಂಗಣ ಕ್ರೀಡಾಂಗಣವನ್ನು ಒಟ್ಟಾರೆಯಾಗಿ ರೂ.800.00 ಲಕ್ಷಗಳ ವೆಚ್ಚದಲ್ಲಿ ಕೇಂದ್ರ ಪುರಸ್ಕೃತ ಖೇಲೋ ಇಂಡಿಯಾ ಯೋಜನೆಯಡಿ ನಿರ್ಮಿಸಲು ಅಂದಾಜುಪಟ್ಟಿಯೊಂದಿಗೆ ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಗೆ ಭಾರತ ಸರ್ಕಾರದಿಂದ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.
ಇ)	ಸದರಿ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿದೆಯೇ (ವಿವರ ನೀಡುವುದು)?	ತೀರ್ಥಹಳ್ಳಿ ತಾಲ್ಲೂಕು ಕ್ರೀಡಾಂಗಣದಲ್ಲಿ ರೂ.450.00 ಲಕ್ಷ ವೆಚ್ಚದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಹಾಗೂ ರೂ.350.00 ಲಕ್ಷ ವೆಚ್ಚದಲ್ಲಿ ವಿವಿದೋದ್ದೇಶ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಲು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ವೈಎಸ್ ಡಿ-/ಇಬಿಬಿ/115/2020

(ಬಿ. ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಯವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1935

ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 30-09-2020

ಕ್ರ.ಸ	ಪ್ರಶ್ನೆ	ಉತ್ತರ
ಅ	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ ಬೃಹತ್ ಬೆಂಗಳೂರು ಮಹಾನಗರ ಸಾರಿಗೆ ನಿಗಮ/ ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ/ ವಾಯವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸೇರಿದಂತೆ ಸಾರಿಗೆ ನಿಗಮ/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು (ಹುದ್ದೆವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು)	ಸಾರಿಗೆ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಈ ಕೆಳಕಂಡಂತಿದೆ: ಸಂಸ್ಥೆಗಳು | ಕ.ರಾ.ರ.ಸಾ.ನಿಗಮ | 37725 ಬೆಂ.ಮ.ಸಾ.ಸಂಸ್ಥೆ | 32898 ವಾ.ಕ.ರ.ಸಾ.ಸಂಸ್ಥೆ | 22699 ಈ.ಕ.ರ.ಸಾ.ಸಂಸ್ಥೆ | 19957 ಹುದ್ದೆವಾರು ಹಾಗೂ ಜಿಲ್ಲಾವಾರು ವಿವರಗಳನ್ನು **ಅನುಬಂಧ-ಅ** ದಲ್ಲಿ ರಲ್ಲಿ ನೀಡಲಾಗಿದೆ.
ಆ	ಸದರಿ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರನ್ನು "ರಾಜ್ಯ ಸರ್ಕಾರಿ ನೌಕರರೆಂದು" ಸರ್ಕಾರ ಘೋಷಿಸುವುದೇ;	ರಾಜ್ಯ ರಸ್ತೆ ಸಾರಿಗೆ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸುವ ಕುರಿತು ಸಾಧಕ-ಬಾಧಕಗಳು, ಕಾನೂನಾತ್ಮಕ ಹಾಗೂ ಆಡಳಿತಾತ್ಮಕ ವಿಚಾರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ನೀಡಲು ನಾಲ್ಕೂ ಸಾರಿಗೆ ಸಂಸ್ಥೆಗಳ ಮಟ್ಟದ ಆಂತರಿಕ ಸಮಿತಿಯನ್ನು ರಚಿಸಲಾಗಿದ್ದು, ಇದೇ ತರಹದ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳನ್ನು ಸಹ ಗಣನೆಗೆ ತೆಗೆದುಕೊಂಡು ಪರಿಶೀಲಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.
ಇ	ಸದರಿ ನೌಕರರುಗಳ ಕೌಟುಂಬಿಕ ಜೀವನ ಭದ್ರತೆಗಾಗಿ ಸರ್ಕಾರವು ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ (ವಿವರ ಒದಗಿಸುವುದು)	ಸಾರಿಗೆ ಸಂಸ್ಥೆಗಳ ನೌಕರರುಗಳ ಕೌಟುಂಬಿಕ ಜೀವನ ಭದ್ರತೆಗಾಗಿ ಒದಗಿಸಿರುವ ಸೌಲಭ್ಯಗಳನ್ನು **ಅನುಬಂಧ-ಆ** ದಲ್ಲಿ ನೀಡಲಾಗಿದೆ.
ಈ	ಸದರಿ ನೌಕರರುಗಳಿಗೆ ರಾಜ್ಯ ಸರ್ಕಾರದ ನೌಕರರಿಗೆ ನೀಡುವ ವೇತನ ಹಾಗೂ ಇನ್ನಿತರೆ ಭತ್ಯೆಗಳನ್ನು ಸಮಾಂತರವಾಗಿ ನೀಡಲಾಗುತ್ತಿದೆಯೇ;	ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ. ನಿಗಮದ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ.

		ಉಳಿದಂತೆ, ನಿಗಮಗಳ ನೌಕರರು ರಾಜ್ಯ ಸರ್ಕಾರದ ಮಾದರಿಯಲ್ಲಿಯೇ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ರಜಾ ಸೌಲಭ್ಯಗಳು, ವೈದ್ಯಕೀಯ ಮರುಪಾವತಿ ಸೌಲಭ್ಯ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿರುತ್ತಾರೆ. ರಾಜ್ಯ ಸರ್ಕಾರದ ನೌಕರರ ವೇತನ ಹಾಗೂ ಭತ್ಯೆಗೆ ಪರಿಷ್ಕರಣೆಯನ್ನು ರಾಜ್ಯ ವೇತನ ಆಯೋಗದ ಮೂಲಕ ಮಾಡಲಾಗುತ್ತದೆ. ಆದುದರಿಂದ, ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿ ಮತ್ತು ವೇತನವನ್ನು ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನ ಶ್ರೇಣಿ ಮತ್ತು ವೇತನಕ್ಕೆ ಹೋಲಿಸಲು ಬರುವುದಿಲ್ಲ.
ಉ	ಇಲ್ಲದಿದ್ದಲ್ಲಿ, ಸದರಿ ನೌಕರರ ವೇತನ ಮತ್ತು ಇತರೆ ಭತ್ಯೆಗಳನ್ನು ಹೆಚ್ಚಳ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು (ವಿವರ ಒದಗಿಸುವುದು)?	ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿರುತ್ತದೆ. ಸಾರಿಗೆ ಸಂಸ್ಥೆಗಳ ಪ್ರಮುಖ ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಗಳ ಪಟ್ಟಿಯನ್ನು 2019ರ ಡಿಸೆಂಬರ್ ಅಂತ್ಯದಲ್ಲಿ ನೀಡಿದ್ದು, ತತ್ಸಂಬಂಧ ಪ್ರಾಥಮಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ, ಈ ಮಧ್ಯೆ ಕೋವಿಡ್-19 ಸಾಂಕ್ರಾಮಿಕ ರೋಗವು ರಾಜ್ಯದಲ್ಲಿ ವ್ಯಾಪಕವಾಗಿ ಹರಡಿರುವುದರಿಂದ, ಕ್ರಮೇಣ ನಿಗಮಗಳ ಬಸ್ಸುಗಳ ಆಚರಣೆಯನ್ನು ಸ್ಥಗಿತಗೊಳಿಸಲಾಯಿತು. ಪರಿಣಾಮವಾಗಿ ಯಾವುದೇ ಆದಾಯ ಬಾರದೇ ನೌಕರರ ವೇತನ ನೀಡಲು ಸಹ ಆರ್ಥಿಕ ಮುಗ್ಗಟ್ಟು ಎದುರಾಗಿದ್ದರಿಂದ, ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೌಕರರ ನೆರವಿಗೆ ಬಂದು ಏಪ್ರಿಲ್-2020ರಿಂದ ಸೆಪ್ಟೆಂಬರ್-2020ರವರೆಗಿನ ವೇತನ ಸಂಬಂಧ ಅನುದಾನವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಟ್ಟಿರುತ್ತದೆ. ಇವೆಲ್ಲವೂ ಸೇರಿದಂತೆ, ಸಧ್ಯದ ಪರಿಸ್ಥಿತಿಯಲ್ಲಿ ವೇತನ ಪರಿಷ್ಕರಣೆಯನ್ನು ತಡೆಹಿಡಿಯುವುದು ಅನಿವಾರ್ಯವಾಗಿದೆ.

ಸಂಖ್ಯೆ: ಟಿಡಿ 180 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

"ಅನುಬಂಧ - ೬"

KARNATAKA STATE ROAD TRANSPORTATION CORPORATION
ESTABLISHMENT SECTION: CENTRAL OFFICE
DIVISION WISE RETURNS

Month: Aug-2020

Sl. No.	Category			BCD	CJR	CKM	CBP	CDG	DVG	HSN	KBS	KLR	MDY	MNG	MRD	MCTD	PTR	RMN	SMG	TMK	RWB	RWH	CE MYS	CE HSN	TRI MLV	TRI HSN	TRI CKM	TRI HLK	Hospital	CTI MLR	KST Press	CO	Total
	ADM																																
1	Superintendent Est	CL-III	S	1	1	1	1	1	1	1	0	1	1	1	1	1	1	1	1	1	1	0	0	0	1	1	0	0	0	1	0	2	22
			W	1	1	1	0	2	1	1	0	0	1	1	1	1	1	1	1	2	0	0	0	0	1	0	0	0	0	0	0	4	21
			V	0	0	0	-1	1	0	0	0	-1	0	0	0	0	0	0	0	1	-1	0	0	0	0	-1	0	0	0	-1	0	2	-1
2	Supervisor Est	CL-III	S	8	6	8	7	6	5	8	1	7	8	7	9	6	7	8	6	9	0	0	0	0	0	0	0	0	0	0	0	8	124
			W	8	3	3	4	4	1	7	1	4	4	6	9	6	6	3	3	6	0	0	0	0	0	0	0	0	0	0	0	9	87
			V	0	-3	-5	-3	-2	-4	-1	0	-3	-4	-1	0	0	-1	-5	-3	-3	0	0	0	0	0	0	0	0	0	0	0	1	-37
3	Assistant	CL-III	S	17	8	15	14	8	7	15	1	14	11	10	18	9	14	15	8	18	2	0	0	0	0	0	0	0	0	0	1	28	233
			W	14	7	13	14	7	7	15	2	11	11	6	15	10	10	11	7	13	2	0	0	0	0	0	0	1	0	0	0	29	205
			V	-3	-1	-2	0	-1	0	0	1	-3	0	-4	-3	1	-4	-4	-1	-5	0	0	0	0	0	0	0	1	0	0	-1	1	-28
4	Personal Assistant	CL-III	S	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	10	10
			W	0	1	0	0	0	0	0	0	0	0	1	0	0	0	0	0	0	0	0	0	0	0	0	0	0	0	0	0	6	8
			V	0	1	0	0	0	0	0	0	0	0	1	0	0	0	0	0	0	0	0	0	0	0	0	0	0	0	0	0	-4	-2
5	Senior Steno	CL-III	S	1	0	1	0	0	0	1	0	0	0	0	1	0	1	0	0	1	0	0	0	0	0	0	0	0	0	0	0	5	11
			W	0	0	0	0	0	0	0	0	0	0	0	1	0	0	0	0	0	0	0	0	0	0	0	0	0	0	0	0	2	3
			V	-1	0	-1	0	0	0	-1	0	0	0	0	0	0	-1	0	0	-1	0	0	0	0	0	0	0	0	0	0	0	-3	-8
6	Junior Steno	CL-III	S	0	1	0	1	1	1	0	1	1	1	1	0	1	0	1	1	0	1	1	0	0	0	0	0	0	0	0	1	4	18
			W	1	0	0	0	0	1	0	0	0	0	0	0	1	0	0	0	1	0	0	0	0	0	0	0	0	0	0	0	4	8
			V	1	-1	0	-1	-1	0	0	-1	-1	-1	-1	0	0	0	-1	-1	1	-1	-1	0	0	0	0	0	0	0	0	-1	0	-10
7	JA-cum-DEO	CL-III	S	98	56	86	75	49	46	87	44	75	66	68	105	64	86	77	49	95	10	8	1	1	1	1	1	1	1	1	3	60	1315
			W	98	55	83	69	50	47	87	43	73	61	62	102	64	86	72	47	89	10	7	1	2	0	1	1	0	1	2	4	55	1272
			V	0	-1	-3	-6	1	1	0	-1	-2	-5	-6	-3	0	0	-5	-2	-6	0	-1	0	1	-1	0	0	-1	0	1	1	-5	-43
7	Havildar	CL-IV	S	1	1	1	1	1	1	1	0	1	1	1	1	1	1	1	1	1	1	0	0	0	0	0	0	0	0	0	0	11	28
			W	1	1	0	0	1	1	1	1	1	0	1	1	1	1	1	0	1	1	1	0	0	0	0	0	0	0	0	1	9	25
			V	0	0	-1	-1	0	0	0	1	0	-1	0	0	0	0	0	-1	0	0	1	0	0	0	0	0	0	0	0	1	-2	-3
8	Helper (Office)	CL-IV	S	16	13	15	14	13	12	15	1	14	15	14	17	14	14	15	13	16	5	1	1	1	1	1	1	1	1	1	1	35	281
			W	15	11	12	9	13	12	14	0	16	14	14	17	15	13	14	9	15	4	0	1	0	1	1	0	1	0	1	0	33	255
	(1 LD & 2 Can Emp)		V	-1	-2	-3	-5	0	0	-1	-1	2	-1	0	0	1	-1	-1	-4	-1	-1	-1	0	-1	0	0	-1	0	-1	0	-1	-2	-26
9	Office Helper (Sweeper)	CL-IV	S	16	12	16	14	11	9	16	2	14	16	14	18	13	14	16	11	18	10	1	0	0	1	1	1	1	0	1	2	0	248
			W	18	9	13	11	9	9	16	2	14	14	11	18	13	11	15	10	15	11	1	0	0	1	0	1	0	1	2	2	1	228
	(CE Sec)		V	2	-3	-3	-3	-2	0	0	0	0	-2	-3	0	0	-3	-1	-1	-3	1	0	0	0	0	-1	0	-1	1	1	0	1	-20
10	Mali	CL-IV	S	0	0	0	0	0	0	0	0	0	0	0	0	0	0	0	0	0	3	0	0	0	0	0	0	0	0	0	1	1	5
			W	1	0	0	0	0	0	1	0	1	0	1	1	0	0	0	0	0	1	0	0	0	0	0	0	0	0	0	0	0	6
	(CE Sec)-Horticulture		V	1	0	0	0	0	0	1	0	1	0	1	1	0	0	0	0	0	-2	0	0	0	0	0	0	0	0	0	-1	-1	1
	ADM	Total	S	158	98	143	127	90	82	144	50	127	119	116	170	109	138	134	90	159	33	11	2	2	4	4	3	3	2	4	9	164	2295
			W	157	88	125	107	86	79	142	49	120	105	103	165	111	128	117	77	142	29	9	2	2	3	2	2	2	2	5	7	152	2118
			V	-2	-10	-18	-20	-4	-3	-3	-1	-8	-14	-14	-6	2	-10	-17	-13	-17	-2	-2	0	0	-1	-2	-1	-1	0	1	-1	-11	-178

Administrative Officer (EST)
K.S.R.T.C., Central Offices,
Bengaluru.

KARNATAKA STATE ROAD TRANSPORTATION CORPORATION
ESTABLISHMENT SECTION: CENTRAL OFFICE
DIVISION WISE RETURNS

Month: Aug-2020

Sl. No.	Category			BCD	CJR	CKM	CBP	CDG	DVG	HSN	KBS	KLR	MDY	MNG	MRD	MCTD	PTR	RMN	SMG	TMK	RWB	RWH	CE MYS	CE HSN	TRI MLV	TRI HSN	TRI CKM	TRI HLK	Hospital	CTI MLR	K Press	CO	Total
	ACCOUNTS																																
11	Superintendent Accounts	CL-III	S	1	1	1	1	1	1	1	1	1	1	1	1	1	1	1	1	1	0	0	1	1	0	0	0	0	0	0	0	5	24
			W	0	1	0	0	1	0	1	1	1	1	1	1	1	1	1	1	1	1	1	1	1	0	0	0	0	0	0	0	5	22
			V	-1	0	-1	-1	0	-1	0	0	0	0	0	0	0	0	0	0	0	1	1	0	0	0	0	0	0	0	0	0	0	-2
	(CE-1)																																
12	Supervisor Accounts	CL-III	S	9	5	8	6	5	4	8	1	6	7	6	10	5	7	7	5	9	1	0	0	0	0	0	0	0	0	0	1	12	122
			W	5	3	4	4	1	3	3	0	3	7	5	7	5	1	5	4	7	1	0	0	0	0	0	0	0	0	0	0	8	76
			V	-4	-2	-4	-2	-4	-1	-5	-1	-3	0	-1	-3	0	-6	-2	-1	-2	0	0	0	0	0	0	0	0	0	0	-1	-4	-46
	Accts+IA+Acdt+CE																																
13	Assistant Accountant	CL-III	S	11	6	10	9	6	5	10	1	9	8	7	11	6	9	10	6	11	4	0	1	1	0	0	0	0	0	0	0	10	151
			W	10	5	10	7	7	7	10	0	2	8	8	9	5	6	7	6	11	4	0	1	0	0	0	0	0	0	0	0	14	137
			V	-1	-1	0	-2	1	2	0	-1	-7	0	1	-2	-1	-3	-3	0	0	0	0	0	-1	0	0	0	0	0	0	0	4	-14
	(CE-1)																																
	Accts	Total	S	21	12	19	16	12	10	19	3	16	16	14	22	12	17	18	12	21	5	0	2	2	0	0	0	0	0	0	1	27	297
			W	15	9	14	11	9	10	14	1	6	16	14	17	11	8	13	11	19	6	1	2	1	0	0	0	0	0	0	0	27	235
			V	-6	-3	-5	-5	-3	0	-5	-2	-10	0	0	-5	-1	-9	-5	-1	-2	1	1	0	-1	0	0	0	0	0	0	-1	0	-62
	STORES																																
14	Stores Superintendent	CL-III	S	1	1	1	1	1	1	1	0	1	1	1	1	1	1	1	1	1	1	0	0	0	0	0	0	0	0	0	0	2	19
			W	1	0	1	0	0	0	1	0	1	0	1	0	1	1	1	0	1	1	0	0	0	0	0	0	0	0	0	0	3	13
			V	0	-1	0	-1	-1	-1	0	0	0	-1	0	-1	0	0	0	-1	0	0	0	0	0	0	0	0	0	0	0	0	1	-6
15	Store Keeper	CL-III	S	2	1	2	2	1	1	2	0	2	1	1	2	1	2	2	1	2	2	-1	0	0	0	0	0	0	0	0	1	3	32
			W	0	1	0	0	0	1	1	0	0	0	0	0	0	0	1	0	1	0	0	0	0	0	0	0	0	0	0	1	4	10
			V	-2	0	-2	-2	-1	0	-1	0	-2	-1	-1	-2	-1	-2	-1	-1	-1	-2	-1	0	0	0	0	0	0	0	0	0	1	-22
16	Assistant Store Keeper	CL-III	S	10	6	9	8	6	5	9	1	8	9	8	11	7	8	9	6	11	4	1	0	0	0	0	0	0	0	0	0	3	139
			W	8	6	6	5	4	4	2	1	5	5	5	4	3	3	5	5	8	2	2	0	0	0	0	0	0	0	0	1	4	88
			V	-2	0	-3	-3	-2	-1	-7	0	-3	-4	-3	-7	-4	-5	-4	-1	-3	-2	1	0	0	0	0	0	0	0	0	1	1	-51
	Stores	Total	S	13	8	12	11	8	7	12	1	11	11	10	14	9	11	12	8	14	7	2	0	0	0	0	0	0	0	0	1	8	190
			W	9	7	7	5	4	5	4	1	6	5	6	4	4	4	7	5	10	3	2	0	0	0	0	0	0	0	0	2	11	111
			V	-4	-1	-5	-6	-4	-2	-8	0	-5	-6	-4	-10	-5	-7	-5	-3	-4	-4	0	0	0	0	0	0	0	0	0	1	3	-79
	STAT																																
17	Statistical Superintendent	CL-III	S	1	0	0	0	0	0	1	0	0	0	0	1	0	1	0	0	1	0	0	0	0	0	0	0	0	0	0	0	-	5
			W	0	0	1	0	0	0	0	0	0	0	0	0	0	1	0	0	0	0	0	0	0	0	0	0	0	0	0	0	-	2
			V	-1	0	1	0	0	0	-1	0	0	0	0	-1	0	0	0	0	-1	0	0	0	0	0	0	0	0	0	0	0	-	-3
18	Statistical Supervisor	CL-III	S	0	1	1	1	1	1	0	0	1	1	1	0	1	0	1	1	0	0	0	0	0	0	0	0	0	0	0	0	1	12
			W	0	0	0	0	1	0	0	0	0	0	1	0	0	0	0	0	0	0	0	0	0	0	0	0	0	0	0	0	1	3
			V	0	-1	-1	-1	0	-1	0	0	-1	-1	0	0	-1	0	-1	-1	0	0	0	0	0	0	0	0	0	0	0	0	0	-9
19	Statistical Assistant	CL-III	S	7	5	7	6	5	4	7	0	6	7	6	8	5	6	7	5	8	1	0	0	0	0	0	0	0	0	0	0	0	100
			W	7	4	6	6	4	4	4	0	3	6	5	8	5	6	7	5	6	0	0	0	0	0	0	0	0	0	0	0	2	88
			V	0	-1	-1	0	-1	0	-3	0	-3	-1	-1	0	0	0	0	0	-2	-1	0	0	0	0	0	0	0	0	0	0	2	-1
	Stat	Total	S	8	6	8	7	6	5	8	0	7	8	7	9	6	7	8	6	9	1	0	0	0	0	0	0	0	0	0	0	1	117
			W	7	4	7	6	5	4	4	0	3	6	6	8	5	7	7	5	6	0	0	0	0	0	0	0	0	0	0	0	3	93
			V	-1	-2	-1	-1	-1	-1	-4	0	-4	-2	-1	-1	-1	0	-1	-1	-3	-1	0	0	0	0	0	0	0	0	0	0	2	-24

KARNATAKA STATE ROAD TRANSPORTATION CORPORATION
ESTABLISHMENT SECTION: CENTRAL OFFICE
DIVISION WISE RETURNS

Month: Aug-2020

Sl. No.	Category			BCD	CJR	CKM	CBP	CDG	DVG	HSN	KBS	KLR	MDY	MNG	MRD	MCTD	PTR	RMN	SMG	TMK	RWB	RWH	CE MYS	CE HSN	TRI MLV	TRI HSN	TRI CKM	TRI HLK	Hos pital	CTI MLR	KST Press	CO	Total
	IT Dept																																
20	Superintendent (Systems)	CL-III	S	0	0	0	0	0	0	0	0	0	0	0	0	1	0	0	0	0	0	0	0	0	0	0	0	0	0	0	0	-	1
			W	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	0	-	0
			V	0	0	0	0	0	0	0	0	0	0	0	0	-1	0	0	0	0	0	0	0	0	0	0	0	0	0	0	0	-	-1
21	Supervisor (Systems)	CL-III	S	6	4	6	5	4	3	6	1	5	6	5	7	5	5	6	4	7	0	0	0	0	0	0	0	0	0	0	0	4	89
			W	2	1	0	1	0	0	0	1	3	0	1	1	3	1	2	1	0	0	0	0	0	0	0	0	0	0	0	0	7	24
			V	-4	-3	-6	-4	-4	-3	-6	0	-2	-6	-4	-6	-2	-4	-4	-3	-7	0	0	0	0	0	0	0	0	0	0	0	3	-65
	(SSO: ACC-2+STAT-1+IT-1)																																
	IT Dept	Total	S	6	4	6	5	4	3	6	1	5	6	5	7	6	5	6	4	7	0	0	0	0	0	0	0	0	0	0	0	4	90
			W	2	1	0	1	0	0	0	1	3	0	1	1	3	1	2	1	0	0	0	0	0	0	0	0	0	0	0	0	7	24
			V	-4	-3	-6	-4	-4	-3	-6	0	-2	-6	-4	-6	-3	-4	-4	-3	-7	0	0	0	0	0	0	0	0	0	0	0	3	-66
	SECURITY																																
22	Divisional Security Superintendent	CL-III	S	1	0	0	0	0	0	1	0	0	0	0	1	0	1	0	0	1	0	0	0	0	0	0	0	0	0	0	0	1	6
			W	0	0	0	0	0	0	0	0	0	0	0	0	0	1	0	0	0	0	0	0	0	0	0	0	0	0	0	0	0	1
			V	-1	0	0	0	0	0	-1	0	0	0	0	-1	0	0	0	0	-1	0	0	0	0	0	0	0	0	0	0	0	-1	-5
23	Divisional Security Inspector	CL-III	S	0	1	1	1	1	1	0	1	1	1	1	0	1	0	1	1	0	0	0	0	0	0	0	0	0	0	0	1	1	1[illegible]
			W	0	0	0	1	1	1	0	1	0	0	0	1	0	0	0	0	0	0	0	0	0	0	0	0	0	0	0	0	1	6
			V	0	-1	-1	0	0	0	0	0	-1	-1	-1	1	-1	0	-1	-1	0	0	0	0	0	0	0	0	0	0	0	-1	0	-8
24	Asst. Security Inspector	CL-III	S	1	1	1	1	1	1	1	5	1	1	1	1	2	1	1	1	1	2	1	0	0	0	0	0	0	0	0	1	3	29
			W	1	1	1	1	1	1	1	5	1	1	1	1	2	1	1	0	1	2	0	0	0	0	0	0	0	0	0	1	0	24
			V	0	0	0	0	0	0	0	0	0	0	0	0	0	0	0	-1	0	0	-1	0	0	0	0	0	0	0	0	0	-3	-5
25	K S T Havildar	CL-III	S	10	5	9	7	5	5	8	14	7	7	6	10	11	9	8	5	9	4	0	0	0	0	0	0	0	0	0	1	2	142
			W	9	5	7	7	5	4	7	14	6	5	6	9	9	9	7	4	6	3	1	0	0	0	0	0	0	0	0	0	3	126
			V	-1	0	-2	0	0	-1	-1	0	-1	-2	0	-1	-2	0	-1	-1	-3	-1	1	0	0	0	0	0	0	0	0	-1	1	-16
26	K S T Constable	CL-III	S	38	25	43	37	26	26	41	101	33	35	33	47	46	38	51	30	65	18	17	0	0	4	4	4	4	3	4	5	10	788
			W	29	13	19	25	22	23	34	32	32	23	22	31	35	17	26	26	44	16	10	0	0	2	2	3	3	3	7	5	7	511
			V	-9	-12	-24	-12	-4	-3	-7	-69	-1	-12	-11	-16	-11	-21	-25	-4	-21	-2	-7	0	0	-2	-2	-1	-1	0	3	0	-3	-277
	SECURITY	Total	S	50	32	54	46	33	33	51	121	42	44	41	59	60	49	61	37	76	24	18	0	0	4	4	4	4	3	4	8	17	979
			W	39	19	27	34	29	29	42	52	39	29	29	42	46	28	34	30	51	21	11	0	0	2	2	3	3	3	7	6	11	668
			V	-11	-13	-27	-12	-4	-4	-9	-69	-3	-15	-12	-17	-14	-21	-27	-7	-25	-3	-7	0	0	-2	-2	-1	-1	0	3	-2	-6	-311

Administrative Officer (EST)
K.S.R.T.C., Central Offices,
Bengaluru.

KARNATAKA STATE ROAD TRANSPORTATION CORPORATION
ESTABLISHMENT SECTION: CENTRAL OFFICE
DIVISION WISE RETURNS

Month: Aug-2020

Sl. No.	Category			BCD	CJR	CKM	CBP	CDG	DVG	HSN	KBS	KLR	MDY	MNG	MRD	MCTD	PTR	RMN	SMG	TMK	RWB	RWH	CE MYS	CE HSN	TRI MLV	TRI HSN	TRI CKM	TRI HLK	Hos pital	CTI MLR	KST Press	D	Total
	TRAFFIC																																
27	Assistant Traffic Superintendent	CL-III	S	6	3	6	6	2	3	7	4	6	2	6	7	5	5	3	2	6	0	0	0	0	0	0	0	0	0	1	0	5	85
			W	3	2	2	1	1	1	4	3	0	0	3	3	3	3	1	2	1	0	0	0	0	0	0	0	0	0	1	0	8	42
			V	-3	-1	-4	-5	-1	-2	-3	-1	-6	-2	-3	-4	-2	-2	-2	0	-5	0	0	0	0	0	0	0	0	0	0	0	3	-43
	(VTMS 50% SSO-02)																																
28	Traffic Inspector	CL-III	S	13	9	13	11	10	9	14	8	12	14	12	17	9	13	14	10	15	0	0	0	0	0	0	0	0	0	0	0	35	238
			W	5	2	7	4	6	6	6	1	7	7	7	9	5	7	7	7	5	0	0	0	0	0	0	0	0	0	0	0	18	116
			V	-8	-7	-6	-7	-4	-3	-8	-7	-5	-7	-5	-8	-4	-6	-7	-3	-10	0	0	0	0	0	0	0	0	0	0	0	-17	-122
	(VTMS 50% SSO-01)																																
29	Assistant Traffic Inspector	CL-III	S	13	12	16	14	8	9	15	8	14	15	12	19	10	12	15	9	17	0	0	0	0	0	0	0	0	0	0	0	0	218
			W	14	11	14	14	7	5	10	6	10	14	10	11	6	8	13	6	17	0	0	0	0	0	0	0	0	0	0	0	2	178
			V	1	-1	-2	0	-1	-4	-5	-2	-4	-1	-2	-8	-4	-4	-2	-3	0	0	0	0	0	0	0	0	0	0	0	0	2	-40
30	Traffic Controller	CL-III	S	38	33	72	64	31	25	73	123	60	57	41	93	54	70	64	31	61	0	0	0	0	0	0	0	0	0	0	0	8	998
			W	35	29	63	52	24	25	63	109	58	57	38	76	54	62	60	27	54	0	0	0	0	0	0	0	0	0	0	0	7	888
			V	-3	-4	-9	-12	-7	0	-10	-14	-7	0	-3	-17	0	-8	-4	-4	-7	0	0	0	0	0	0	0	0	0	0	0	-1	-110
31	Driver - Regular + Dn.Office	CL-III	S	1045	688	963	877	418	532	923	2	896	698	720	1230	829	963	852	461	1029	1	2	1	1	10	10	6	6	1	10	0	49	13223
			W	886	447	662	558	340	454	886	2	732	483	568	751	663	573	541	433	723	1	3	1	1	8	7	2	2	1	11	0	33	9772
